## ಇಲ್ಲಿಯವರೆಗೆ



ಇರುಳಲ್ಲಿ ಬಂದ ಗಾಂಧಿ ದಂಪತಿ ಮುದ್ದುವೀರಪ್ಪನನ್ನು ಕಣ್ತುಂಬಿಕೊಂಡು ಹೋದರು. ಆದರೆ, ಮಹಾತ್ಮನನ್ನು ನೋಡುವ ಅವಕಾಶ ಮುದ್ದುವೀರಪ್ಪನಿಗೆ ದೊರೆಯಲೇ ಇಲ್ಲ. ಎಲ್ಲಕ್ಕೂ ಮೂಕಸಾಕ್ಷಿಯಾದ ಮಹಾವೃಕ್ಷದ ಅಸ್ತಿತ್ವಕ್ಕೂ ಆತಂಕ ಎದುರಾಯಿತು. ರಸ್ತೆಯ ನೆಪದಲ್ಲಿ ಮರವನ್ನು ಕಡಿಯುವ ಸಂಚುಗಳು ಆರಂಭವಾದವು. ಮಹಾವೃಕ್ಷಕ್ಕೆ ಹುಟ್ಟು ಮತ್ತು ಸಾವಿನ ಅನುಭವ ಹೊಸತೇನೂ ಅಲ್ಲ. ಶಿಸ್ತಿನ ಶಿವಪ್ಪ ನಾಯಕನ ಸಾವಿನ ಸಂಚನ್ನು ಇದೇ ವೃಕ್ಷ ವಿಫಲಗೊಳಿಸಿತ್ತು. ಇಂಥ ಮಹಾತಾಯಿಯಂಥ ವೃಕ್ಷದ ಬೇರುಗಳಿಗೆ ವಿಷ ಸುರಿಯುವ ಪ್ರಯತ್ನಗಳು ನಡೆದವು. ಎಂದಿನಂತೆ ಮರದ ನೆರವಿಗೆ ಬಂದ್ದು ಜನಸಾಮಾನ್ಯರೇ. ಅಪ್ಪಿಕೋ ಚಳವಳಿ ನಡೆಸಿದರು. ಮರ ಕಡಿಯಲು ಸಂಚು ಮಾಡಿದವರ ವಿರುದ್ಧ ದನಿಯೆತ್ತಿದರು.

ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನೆಲ್ಲ ಮರೆತು ಒಂದಾಗಿಬಿಟ್ಟಿದ್ದರು.

ಎಷ್ಟೋ ಹೊತ್ತಿನ ನಂತರ ಎದ್ದು ಕುಳಿತವನು ನನ್ನ ಬುಡಕ್ಕೆ ಒರಗಿಕೊಂಡು ಚಕ್ಕಲಬಕ್ಕಲ ಹಾಕಿಕೊಂಡು ಧ್ಯಾನಕ್ಕೆ ಕುಳಿತವನಂತೆ ಕೈಯೊಳಗೆ ಕೈ ಇಟ್ಟುಕೊಂಡು ಕುಳಿತ. ಎಷ್ಟೋ ಹೊತ್ತಾಯಿತು. ಕಾಲುಗಂಟೆ ಇಪ್ಪತ್ತು ನಿಮಿಷಕ್ಕೆ ಮುಗಿಯಬೇಕಾಗಿದ್ದ ಧ್ಯಾನ ಮುಗಿಯಲಿಲ್ಲ. ನನಗೆ ಅವನೇನಾದರೂ ಹಂಗೇ ಸತ್ತುಗಿತ್ತು ಹೋಗಿಬಿಟ್ಟನೇ ಎಂಬ ಅನುಮಾನವಾಗಿ ಇಣುಕಿ ನೋಡಿದೆ. ಇಲ್ಲ, ಅವನ ಶ್ವಾಸಕೋಶಗಳು ಏರಿಳಿಯುತ್ತಿದ್ದವು. ಧ್ಯಾನ ನಿದ್ದೆಗೂ ಪರಿವರ್ತನೆಯಾಗುವ ಸಾಧ್ಯತೆ ಇತ್ತು. ಆದರೆ ಆತ ಧ್ಯಾನಕ್ಕೂ ಮಿಗಿಲಾದ ತಪಸ್ಸು ಮಾಡಲು ನಿರ್ಧರಿಸಿದ್ದ.

ಮಂಜುನಾಥ ತನ್ನ ಮಗನ ಸಾವಿನ ಕಾರಣದಿಂದಾಗಿ ವೈರಾಗ್ಯಕ್ಕೊಳಗಾಗಿದ್ದ. ಯಾರ ಬಳಿಯೂ ಏನೂ ಹೇಳಿಕೊಳ್ಳದೇ ಮೌನಿಯಾಗಿದ್ದ. ಅವನು ತನ್ನ ದುಃಖವನ್ನೆಲ್ಲ ನಂಜುಂಡನಂತೆ ಗಂಟಲಲ್ಲೇ ತುಂಬಿಕೊಂಡುಬಿಟ್ಟಿದ್ದ. ಅದನ್ನು ಯಾರ ಬಳಿಯಲ್ಲಾದರೂ ಹೇಳಿಕೊಂಡು ಹೊರಹಾಕಿಬಿಟ್ಟಿದ್ದರೆ, ಇಲ್ಲವೇ ಹೊಟ್ಟೆಯೊಳಕ್ಕಾದರೂ ನುಂಗಿಕೊಂಡುಬಿಟ್ಟಿದ್ದರೆ ತಣ್ಣಗಾಗಿಬಿಡುತ್ತಿದ್ದನೇನೋ. ಆದರೆ ಆತನ ಹೆಂಡತಿಯ ನೋಟವನ್ನು ಎದುರಿಸಲಾರದೇ ಮೌನಕ್ಕೆ ಶರಣಾದವನು ಮಾತನ್ನೇ ನಿಲ್ಲಿಸಿಬಿಟ್ಟಿದ್ದ. ಮಗನ ಮೂರನೇ ದಿನದ ಕ್ರಿಯೆಯನ್ನು ಮುಗಿಸಿಕೊಂಡು ಬಂದು ನನ್ನ ಬುಡದಲ್ಲಿ ಕುಳಿತವನು ಅಲ್ಲಿಂದ ಏಳಲೇ ಇಲ್ಲ. ಪಾಪ, ಮನೆಯವರು ಬಂದು ಏನು ಮಾಡಿದರೂ ಮನೆಗೆ ಬರುವುದಿಲ್ಲವೆಂದು ತಲೆಯಾಡಿಸಿದ. ಊಟದ ಬಾಕ್ಸನ್ನು ತಂದು ಅಲ್ಲಿ ಇಕ್ಕಿದರೂ ಆತ ಮೂಸೂ ನೋಡಲಿಲ್ಲ. ಅವನ ಹೆಂಡತಿಯಂತೂ, ‘ಮಗನೂ ಕೈಬಿಟ್ಟ, ಈಗ ನೀವೂ ಕೈಬಿಟ್ಟರೆ ನಾನೆಲ್ಲಿಗೆ ಹೋಗಬೇಕು?’ ಎಂದು ಬಿದ್ದುಬಿದ್ದು ಹೊರಳಾಡಿದಳು. ಏನು ಮಾಡಿದರೂ ಇವನು ಮನೆಗೆ ಹೋಗಲೊಲ್ಲೆನೆಂದ. ‘ಅವನಿಗೆ ಪಾಪಪ್ರಜ್ಞೆ ಕಾಡುತ್ತಿದೆ. ಪಶ್ಚಾತ್ತಾಪ ಕರಗಿ, ಸಮಾಧಾನ ಆಗುವವರೆಗೆ ಸುಮ್ಮನೇ ಬಿಟ್ಟುಬಿಡಿ’ ಎಂದು ಯಾರೋ ಸಲಹೆ ನೀಡಿ ಆಕೆಯನ್ನು ಸಂತೈಸಿ ಕಳಿಸಿದರು.

ಒಂದು ದಿನ ಕಳೆಯಿತು. ಹಸಿವು ನೀರಡಿಕೆಗಳನ್ನು ಎಷ್ಟು ದಿನ ತಡೆದುಕೊಂಡು ಇರಲು ಸಾಧ್ಯ. ಅದಕ್ಕೆಲ್ಲ ಪೂರ್ವಸಿದ್ಧತೆ ಇರಬೇಕಲ್ಲವೇ. ಮನೆಯವರು ಇಟ್ಟ ಊಟವನ್ನು ಬದಲಾಯಿಸಿ ಹೋದರು. ಅದನ್ನೂ ತಿರುಗಿ ನೋಡಲಿಲ್ಲ. ಬೆಳಗ್ಗೆ ಒಂದು ಸಲ ಕೆರೆ ಕಡೆ ಮಲಮೂತ್ರಕ್ಕೆಂದು ಹೋಗಿಬಂದರೆ ಮುಗಿಯಿತು. ಕೂತು ಚಿಂತಾಕ್ರಾಂತನಾಗಿ ಯೋಚಿಸುವುದು, ಇಲ್ಲವಾದರೆ ಅಂಗಾತ ಮಲಗಿ ನನ್ನ ಕೊಂಬೆಗಳನ್ನು, ಎಲೆಗಳನ್ನು ಅಲ್ಲಿ ಅಡ್ಡಾಡುತ್ತಿರುವ ಕೋತಿ, ಅಳಿಲು, ಇಲ್ಲವೇ ಬಂದು ಕೂತು ಎದ್ದು ಹೋಗುವ ವಿವಿಧ ಜಾತಿಯ ಪಕ್ಷಿಗಳನ್ನು ಅವಲೋಕಿಸುವುದು, ಅವುಗಳ ಜೀವನ ಕ್ರಮದ ಬಗ್ಗೆ ಅಲೋಚಿಸುವುದು ಹೀಗೆ..

ಅವು ಮನುಷ್ಯನಂತೆ ಸಾವು ನೋವುಗಳಿಗೆ ಹೇಗೆ ಸ್ಪಂದಿಸುತ್ತವೆ ಎಂಬ ಆಲೋಚನೆಯಿಂದ ಹಿಡಿದು ಈ ಸಾವು ಎಂದರೇನು, ಅದು ಯಾಕೆ ಬರುತ್ತದೆ. ಮನುಷ್ಯ ಯಾಕೆ ಹುಟ್ಟಬೇಕು, ಯಾಕೆ ಸಾಯಬೇಕು, ಸತ್ತ ಮೇಲೆ ಮನುಷ್ಯನಿಗೇನಾಗುತ್ತದೆ? ಮತ್ತೆ ಹುಟ್ಟಿ ಬರುತ್ತಾನೆಯೇ? ಬಂದರೂ ಮನುಷ್ಯನಾಗಿಯೇ ಹುಟ್ಟುತ್ತಾನೆಯೋ, ಅಥವಾ ಈ ಜನ್ಮದಲ್ಲಿ ಮಾಡಿದ ಪಾಪಪುಣ್ಯಗಳ ಆಧಾರದಲ್ಲಿ ಇನ್ನೇನೋ ಆಗಿ ಹುಟ್ಟುತ್ತಾನೆಯೋ... ಹೀಗೆ ಏನೇನೋ ಆಲೋಚನೆಗಳನ್ನು ಮಾಡತೊಡಗಿದ.

ಮೂರು ನಾಲ್ಕು ದಿನ ಬಿಟ್ಟು ಮನೆಯವರು ಬಂದು ಏನೋನೋ ಕಷ್ಟಪಟ್ಟು ಮನೆಗೆ ಕರೆದೊಯ್ಯಲು ಪ್ರಯತ್ನಿಸಿದರೂ ಮಂಜುನಾಥ ಜಗ್ಗಲಿಲ್ಲ. ಅವನ ಆಫೀಸಿನವರೆಲ್ಲ, ‘ಅಯ್ಯೋ ಮಗ ಸತ್ತ ಮೇಲೆ ಹುಚ್ಚು ಹಿಡಿದುಬಿಟ್ಟಿತಂತೆ’ ಅಂತ ಬಂದು ನೋಡಿಕೊಂಡು ಮರುಕ ವ್ಯಕ್ತಪಡಿಸಿ ಹೋಗುತ್ತಿದ್ದರು. ಆ ಮರ ಕಡಿಯಲು ಆದೇಶ ನೀಡಿದ್ದ ಮೇಲಾಧಿಕಾರಿಗೂ ಹೋಗಿ ಇವನನ್ನು ನೋಡಿಕೊಂಡು ಬರಬೇಕೆಂದು ತೀವ್ರವಾಗಿ ಅನ್ನಿಸಿದರೂ ಯಾಕೋ ಭಯಬಿದ್ದನಂತೆ, ಎಲ್ಲಿ ತಾನೂ ಹಾಗೆ ವಿರಾಗಿಯಾಗಿಬಿಡುತ್ತೇನೋ ಎಂದು. ಆತ ನನ್ನಂಥ ಬೃಹತ್ ದೇವರ ವೃಕ್ಷವನ್ನು ಕಡಿಯಲು ಹೇಳಿ ತಪ್ಪುಮಾಡಿಬಿಟ್ಟೆ ಎಂದು ಒಳಗೊಳಗೇ ತಳಮಳಿಸಿದನಂತೆ. ತನ್ನ ಇನ್ನುಳಿದ ಸೇವೆಯಲ್ಲಿ ನನ್ನ ಸುದ್ದಿಗೆ ಬರದೇ ಇರಲು ನಿರ್ಧರಿಸಿಬಿಟ್ಟನಂತೆ.

ನಾಲ್ಕೈದು ದಿನಗಳಾದ ಮೇಲೆ ಊರ ಜನರಲ್ಲಿ ಕೆಲ ಹೆಣ್ಣುಮಕ್ಕಳು, ‘ಅಣ್ಣಾ ತಿನ್ನಿ, ದೇವ್ರು ಇಟ್ಟಂಗೆ ಆಗುತ್ತೆತೆ...’ ಎಂದಂದು ಇಟ್ಟುಹೋಗುತ್ತಿದ್ದ ತಟ್ಟೆಯನ್ನೂ ನೋಡಿದ. ಯಾಕೋ ತಿನ್ನಲು ಮನಸ್ಸು ಬರಲಿಲ್ಲ. ಆದರೆ ಕರುಳು ಹೊಟ್ಟೆಯಲ್ಲಿ ಏನೂ ಇಲ್ಲದೇ ತನ್ನನ್ನು ತಾನೇ ಕಚ್ಚಿಕೊಳ್ಳುತ್ತ ಹಿಂಡಿದಂತಾಗಲಾರಂಭಿಸಿತು. ತಾನು ನೋಡುತ್ತಿರುವ ತಟ್ಟೆಯನ್ನೇ ನಾಯಿಯೊಂದು ದುರುಗುಟ್ಟಿಕೊಂಡು ನೋಡುತ್ತಿದೆ. ಇವನು ಯಾವಾಗ ಕೈ ಹಾಕುವನೋ, ತಾನು ಯಾವಾಗ ಬಾಯಿ ಹಾಕಬೇಕು ಎಂದು ಸಮಯ ಸಾಧಿಸುತ್ತಿತ್ತು. ಅದು ಒಂದು ಇಂಚು ಮೇಲೇಳುವಂತೆ ಕಂಡಾಗ ಈತನಿಗೆ ಅದು ಎಲ್ಲಿ ಎಂಜಲು ಮಾಡಿಬಿಡುತ್ತದೋ, ಅಂಥದನ್ನು ತಾನು ತಿನ್ನುವುದು ಹೇಗೆ ಅನ್ನಿಸುತ್ತಿದ್ದಂತೆ ತಿನ್ನುವುದೋ ಬಿಡುವುದೋ ಎಂದು ಗಂಟೆಗಳ ಕಾಲ ಚಿಂತನ ಮಂಥನ ನಡೆಸಿ ಕೊನೆಗೆ ಸೋತು ಒಂದು ತುತ್ತನ್ನು ತಾನು ಎತ್ತಿಕೊಂಡು ಉಳಿದದ್ದನ್ನು ಅದಕ್ಕೆ ಹಾಕುವುದೆಂದು ನಿರ್ಧರಿಸಿದ. ಬಲಗೈಯಿಂದ ಒಂದು ತುತ್ತನ್ನು ಎತ್ತಿಕೊಂಡು, ಅದನ್ನು ಬಾಯಿಗಿಡುವ ಮುನ್ನವೇ ಎಡಗೈಯಿಂದ ತಟ್ಟೆಯನ್ನು ನಾಯಿಯತ್ತ ಮುಂದಬ್ಬಿದ. ಅದು ಎದ್ದು ತನ್ನ ಬಾಲದೊಂದಿಗೆ ಇಡೀ ಹಿಂಭಾಗವನ್ನು ಅಲ್ಲಾಡಿಸುತ್ತ ಖುಷಿ ಅನುಭವಿಸುತ್ತ ತಿನ್ನಲಾರಂಭಿಸಿತು.

ಮಂಜುನಾಥ ಎತ್ತಿಕೊಂಡ ಆ ತುತ್ತನ್ನು ಏನು ಮಾಡುತ್ತಾನೋ ನೋಡಬೇಕೆಂದು ದೂರದಿಂದಲೇ ಗಮನಿಸಿದರೂ ಗಮನಿಸದಂತೆ ಊರ ಜನ ನೋಡುತ್ತಿದ್ದರು. ಕೈಯನ್ನು ಬಾಯವರೆಗೂ ಒಯ್ದ. ಆಹಾ ತಿಂದುಬಿಟ್ಟ, ಉಪವಾಸ ಸತ್ಯಾಗ್ರಹ ಮುಗಿಯಿತು ಎಂದು ಜನ ಕೇಕೆ ಹೊಡೆಯಬೇಕೆನ್ನುವಷ್ಟರಲ್ಲಿ ಮತ್ತೆ ಕೈಯನ್ನು ಹಿಂದಕ್ಕೆ ತಂದ. ಇಲ್ಲ, ಅದನ್ನು ಆ ನಾಯಿಗೇ ಹಾಕಿಬಿಡುತ್ತಾನೆ ಎಂದುಕೊಂಡರು ಜನ. ಆದರೆ ಆತ ಅದನ್ನೂ ಮಾಡಲಿಲ್ಲ. ಲಿಂಗವನ್ನು ಅಂಗೈಯಲ್ಲಿ ಇಟ್ಟುಕೊಂಡು ಜಪಿಸುವಂತೆ ಕಣ್ಣುಮುಚ್ಚಿ ಏನೇನೋ ಜಪಿಸುತ್ತಿದ್ದ. ಅವನ ಕಣ್ಣಂಚಲ್ಲಿ ನೀರು ಜಿನುಗಿದ್ದು ಯಾರ ಕಣ್ಣಿಗೂ ಕಾಣಲಿಲ್ಲ. ಕೊನೆಗೆ ಒಂದು ಗಟ್ಟಿ ನಿರ್ಧಾರ ಮಾಡಿ, ಇನ್ನೂ ಕಾಯುವುದರಲ್ಲಿ ಅರ್ಥವಿಲ್ಲವೆಂದು ಬಾಯಿಗಿಟ್ಟುಕೊಂಡೇಬಿಟ್ಟ!